1346(1939) ಶ್ರೀ ಲಾಲಾಜಿ ಆರ್ ಮೆಂಡನ್ (ಕಾಪು) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಾಪು ಹೋಬಳಿಯಲ್ಲಿ ಭೂ ಮಾಲೀಕರಿಗೆ ಸರ್ಕಾರದಿಂದ ನೀಡಬೇಕಾದ ಪರಿಹಾರದ ಹಣವೆಷ್ಟು ,

ಆ) ಈ ಹಣವನ್ನು 2007–08 ನೇ ಸಾಲಿನಲ್ಲಿ ಪೂರ್ಣವಾಗಿ ಬಿಡುಗಡೆ ಮಾಡಲಾಗುವುದೆ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಕಾಪು ಹೋಬಳಿಗೆ ಸಂಬಂಧಿಸಿದಂತೆ ಭೂ ಮಾಲೀಕರಿಗೆ ಪರಿಹಾರ ನೀಡಲು ರೂ 14 70 ಲಕ್ಷಗಳೆಂದು ನಿಗದಿಪಡಿಸಲಾಗಿದೆ ಒಟ್ಟು 1321 ಜನ ಭೂ ಮಾಲೀಕರಿಗೆ ಪರಿಹಾರ ಪಾವತಿಸಲು ಬಾಕಿ ಇದೆ, ಪ್ರಸ್ತುತ ಮಾಜಿ ಭೂ ಮಾಲೀಕರಿಗೆ ಪರಿಹಾರ ಪಾವತಿಸಲು ರೂ 3,60,848 ಅನುದಾನ ಲಭ್ಯವಿರುತ್ತದೆ ಆದರೆ ಮಾಜಿ ಭೂ ಮಾಲೀಕರು ಪರಿಹಾರದ ಬಗ್ಗೆ ಜಮೀನುಗಳ ಬಗ್ಗೆ ಕ್ರಮ ಬದ್ಧವಾದ ದಸ್ತಾವೇಜುಗಳನ್ನೊಳಗೊಂಡ ಅರ್ಜಿಸಲ್ಲಿಸದಿರುವುದರಿಂದ ಪರಿಹಾರ ಪಾವತಿಸಲು ಸಾಧ್ಯವಾಗುವುದಿಲ್ಲ ಆದುದರಿಂದ ಈ ಸಾಲಿಗೆ ಅನುದಾನ ಬಿಡುಗಡೆಯ ಅಗತ್ಯವಿರುವುದಿಲ್ಲ

ಆ) ಪ್ರಸ್ತುತ ಅನುದಾನ ಲಭ್ಯವಿರುವುದರಿಂದ 2007–08 ನೇ ಸಾಲಿಗೆ ಹೆಚ್ಚಿಸಿ ಅನುದಾನ ಅಗತ್ಯವಿರುವುದಿಲ್ಲ

1347 (1645) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಉಪ ನೋಂದಣಿ ಅಧಿಕಾರಿಗಳ ಕಛೇರಿಗಳನ್ನು ಪ್ರಾರಂಭಿಸುವಾಗ ಅನುಸರಿಸುವ ನಿಯಮಗಳೇನು, ಎಷ್ಟು ಜನಸಂಖ್ಯೆಗೆ ಒಂದರಂತೆ ಈ ಕಛೇರಿಗಳನ್ನು ತೆರೆಯಲಾಗುವುದು,

ಆ) ಈಗ ಬೆಂಗಳೂರು ನಗರದಲ್ಲಿರುವ ಉಪ ನೋಂದಣಾಧಿಕಾರಿಗಳ ಕಛೇರಿಗಳ ಸಂಖ್ಯೆ ಎಷ್ಟು, ಇದು ನಗರದ ಜನಸಂಖ್ಯೆಗೆ ಅನುಗುಣವಾಗಿದೆಯೇ,

ಇ) ಒಂದು ವೇಳೆ ಜನಸಂಖ್ಯೆಗೆ ಅನುಗುಣವಾಗಿಲ್ಲದಿದ್ದಲ್ಲಿ ನಗರದಲ್ಲಿ ಯಾವ ಯಾವ ಪ್ರದೇಶಗಳಲ್ಲಿ ಹೊಸದಾಗಿ ಹೆಚ್ಚುವರಿಯಾಗಿ ಈ ಕಛೇರಿಗಳನ್ನು ಪ್ರಾರಂಭಿಸಲಾಗುವುದು,

ಈ) ಈ ಕಛೇರಿಗಳಿಂದ ಕಳೆದ 3 ವರ್ಷಗಳಿಂದ ಪ್ರತಿವರ್ಷ ಬಂದಿರುವ ಅದಾಯವೆಷ್ಟು, ಕಛೇರಿವಾರು (ವಿವರಗಳನ್ನು ಒದಗಿಸುವುದು)?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ರಾಜ್ಯದಲ್ಲಿ ಉಪ ನೋಂದಣಿ ಕಛೇರಿಗಳನ್ನು ಪ್ರಾರಂಭಿಸುವಾಗ ಅಥವಾ ವಿಭಜಿಸುವಾಗ ಅಂತಹ ಕಛೇರಿಗಳ ವ್ಯಾಪ್ತಿಯಲ್ಲಿ ನೋಂದಣಿಯಾಗುವ ದಸ್ತಾವೇಜುಗಳ ಸಂಖ್ಯೆ ಮತ್ತು ಆದಾಯವನ್ನು ಆಧಾರವಾಗಿಟ್ಟುಕೊಂಡು ಕಛೇರಿಗಳನ್ನು ಪ್ರಾರಂಭಿಸಲಾಗಿದೆ

ಆ) ಪ್ರಸ್ತುತ ಬೆಂಗಳೂರು ನಗರದಲ್ಲಿ 13 ಉಪ ನೋಂದಣಾಧಿಕಾರಿಗಳ ಕಛೇರಿಗಳಿವೆ ಈ ಕಛೇರಿಗಳನ್ನು ಜನಸಂಖ್ಯೆಗೆ ಅನುಗುಣವಾಗಿ ಪ್ರಾರಂಭಿಸಿರುವುದಿಲ್ಲ

ಇ) ಬೆಂಗಳೂರು ನಗರದಲ್ಲಿ ಒಟ್ಟು 13 ಉಪ ನೋಂದಣಿ ಕಛೇರಿಗಳ ಪೈಕಿ 6 ಉಪ ನೋಂದಣಿ ಕಛೇರಿಗಳಲ್ಲಿ ಅತಿ ಹೆಚ್ಚಿನ ಕೆಲಸದ ಒತ್ತಡವಿರುವುದರಿಂದ, ಈ ಕಛೇರಿಗಳನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ ಆರ್‌ಡಿ 25 ಮುನೋಸ 2005, ದಿನಾಂಕ 18–01–2007 ರಲ್ಲಿ 27 ಕಛೇರಿಗಳನ್ನಾಗಿ ವಿಭಜಿಸಿದ್ದು, ಹೊಸ ಕಚೇರಿಗಳು ದಿನಾಂಕ 01–04–2007 ರಿಂದ ಜಾರಿಗೆ ಬರುವಂತೆ ಪ್ರಾರಂಭವಾಗುತ್ತವೆ (ಅನುಬಂಧ – 1 ರಲ್ಲಿ ವಿವರ ನೀಡಿದೆ)

ಈ) ಅನುಬಂಧ – 2 ರಲ್ಲಿ ಮಾಹಿತಿ ನೀಡಿದೆ

2004 – 05 – ರೂ 1,31,08,26,2,968

2005 – 06 – ರೂ 1,54,50,34,5,386

2006 – 07 – ರೂ 1,97,76,05,8,812

Sl.No.	Sub-District
1	Sub-Registrar's Office, Kacharakanahalli, HQ Kacharakanahalli
2	Sub-Registrar's Office, Hebbal, HQ Hebbal
3	Sub-Registrar's Office, Peenya, HQ Peenya
4	Sub-Registrar's Office, Laggere, HQ Laggere
5	Sub-Registrar's Office, Nagarbhavi, HQ Nagarbhavi
6	Sub-Registrar's Office, Madanayakanahalli, HQ Madanayakanalli
7	Sub-Registrar's Office, Dasanapura, HQ Dasanapura
8	Sub-Registrar's Office, Varthur Hobli, HQ Varthur
9	Sub-Registrar's Office, Begur, North of Housur Road, HQ Begur
10	Sub-Registrar's Office, Bommanahalli (Bommanahalli CMC limits), HQ Bommanahalli
11	Sub-Registrar's Office,Kengeri, HQ Kengeri

12	Sub-Registrar's Office, Kengeri - 2 as SRO Rajarajeshwari Nagara (Covering CMC area surrounding villages), HQ Rajarajeshwari Nagar
13	Sub-Registrar's Office,Uttarahalli - 1 as SRO, JP Nagara, HQ JP Nagar
14	Sub-Registrar's Office, Uttarahalli-2 as SRO Banashankari, HQ Banashankari
15	Sub-Registrar's Office, Tavarekere, HQ Tavarekere
16	Sub-Registrar's Office, Mahadevapura (Mahadevapura CMC Limits) HQ White Field
17	Sub-Registrar's Office, Bidarahalli, HQ Avalahalli
18	Sub-Registrar's Office, K R Puram (K R Puram CMC Limits), HQ K R Puram
19	Sub-Registrar's Office, Banaswadi, HQ Banaswadi
20	Sub-Registrar's Office, Yelahanka (Yelahanka CMC Limits) HQ Yelahanka
21	Sub-Registrar's Office, Yelahanka Rural (including Byatarayanapura CMC Limits)

	HQ Byatarayanapura
22	Sub-Registrar's Office, Hesaraghatta, HQ Hesaraghatta
23	Sub-Registrar's Office, Jala HQ Jala
24	Sub-Registrar's Office, Anekal, HQ Anekal
25	Sub-Registrar's Office, Sarjapura, HQ Sarjapura
26	Sub-Registrar's Office, Attibele, HQ Chandapur
27	Sub-Registrar's Office, Jigani, HQ Bannerghatta

ಅನುಬಂಧ - 2

GOVERNMENT OF KARNATAKA

DEPARTMENT OF STAMPS AND REGISTRATION

Revenue Realisation in Bangalore (urban) District during the year 2004-05, 2005-06 AND 2006-07

SOURCE - DEPARTMENT FIGURE **(IN RUPEES)**

SL NO	NAME OF THE SUB-REGISTRAR	2004-05 TOTAL	2005-06 TOTAL	2006-07 (UP TO FEB 2007) TOTAL
1	ANEKAL	566022888	902769658	1194765140
2	BASAVANGUDI	503653366	561070546	593887659

3	BANGALORE (N)	1464698490	1768254280	2769025649
4	BANGALORE (S)	2329695423	2189035131	3418855327
5	GANDHINAGAR	688879296	845544290	802959228
6	JAYANAGAR	685749212	703731066	728630471
7	KENGERI	1750965274	2204364093	2992568002
8	K R PUR	1774297159	2431630526	2772649357
9	RAJAJINAGAR	593056848	617269875	655898782
10	SRIRAM PUR	258174288	304563490	286580042
11	SHIVAJI NAGAR	1249072211	1445543832	1492059895
12	YELAHANKA	889553439	1162105442	1841821927
13	ADD D R OFFICE (B D A)	354445074	314463157	226357333
	TOTAL	**13108262968**	**15450345386**	**19776058812**

1348(1646) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) – ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅರಣ್ಯ ಇಲಾಖೆಯಲ್ಲಿ ಇರುವ ಡಿ ಸಿ ಎಫ್ , ಎ ಸಿ ಎಫ್ , ಮತ್ತು ಆರ್ ಎಫ್ ಒ ಹುದ್ದೆಗಳ ಸಂಖ್ಯೆ ಎಷ್ಟು,

ಆ) ಈ ಪೈಕಿ ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು, ಮತ್ತು ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು, ಇವರುಗಳು ಹಾಲಿ ಕಾರ್ಯನಿರ್ವಹಿಸುತ್ತಿರುವ ಸ್ಥಳ, ಪದನಾಮ ಮುಂತಾದ ವಿವರಗಳನ್ನು ಹುದ್ದೆವಾರು ಒದಗಿಸುವುದು,